ತಿರುಮಲೆ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ನವೆಂಬರ್ 2020

## ಸಪ್ತಗಿರಿ ಅನುಬಂಧ






# ತಿರುಪ್ಪಾಣಾಳ್ವಾರ್

ತಿರುಮಲ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ



ಸಪ್ತಗಿರಿ ಅನುಬಂಧ

ಸಂಪುಟ -01 ನವೆಂಬರ್ - 2020 ಸಂಚಿಕೆ -09

## ವಿಷಯ ಸೂಚಿಕೆ


| | | ಪುಟ |
|---|---|---|
| ಹಿಂದೂ ದೇವರು | ಶ್ರೀ ಮಹಾಲಕ್ಷ್ಮೀ ದೇವಿ<br>-ಶ್ರೀಮತಿ. ಬಿ. ಪದ್ಮಜ | 32 |
| ಹನ್ನೆರಡು ಆಳ್ವಾರರು | ತಿರುಪ್ಪಾಣ್‌ಳ್ವಾರ್<br>- ಶ್ರೀಮತಿ. ಡಾ॥ ಸಿ.ಎಸ್. ಊರ್ಮಿಳಾ | 34 |
| ಕನ್ನಡ ಹರಿದಾಸವರೇಣ್ಯರು | ಪ್ರಸನ್ನ ವೆಂಕಟದಾಸರು<br>- ಶ್ರೀಮತಿ. ಸುಧಾಮಧುಸೂದನ್ | 36 |
| ಚಿತ್ರಕಥೆ | ಪದ್ಮ ಸರೋವರ<br>ಕಥೆ - ಶ್ರೀನಿವಾಸ ದೀಕ್ಷಿತರು<br>ಚಿತ್ರಗಳು - ಕೆ. ದ್ವಾರಕನಾಥ್ | 38 |
| ಬಾಲನೀತಿ | ದೇವರಿಗೆ ಅರ್ಪಿತ<br>ಡಿ. ಎಸ್. ಮಧುಸೂದನ್ | 42 |
| ಪ್ರಜ್ಞಾವಂತ ಬಾಲಕಿ - | ಎಸ್. ಭವ್ಯ | 44 |
| ಕ್ವಿಜ್ | -ಶ್ರೀಮತಿ. ಸೂರ್ಯವಂಶಿ | 45 |
| ಚಿತ್ರಲೇಖನ | | 46 |


ಮುಖಚಿತ್ರ - ಶ್ರೀ ಮಹಾಲಕ್ಷ್ಮೀ ಅಮ್ಮನವರು
ಹಿಂಬದಿಚಿತ್ರ - ಶ್ರೀ ನರಕಾಸುರ ವಧೆ (ಚಿತ್ರಕಲೆ)

# ಶ್ರೀ ಮಹಾಲಕ್ಷ್ಮೀ ದೇವಿ

- ಶ್ರೀಮತಿ. ಬಿ. ಪದ್ಮಜ

ಎಲ್ಲರಿಗೂ ತಿಳಿದಿರುವಂತೆ ಮಹಾಲಕ್ಷ್ಮೀ ಅಂದರೆ ಸಂಪತ್ತು, ಐಶ್ವರ್ಯ ಇನ್ನೂ ಅನೇಕ ಸೌಭಾಗ್ಯಗಳಿಗೆ ಅಧಿದೇವತೆ.

ಈ ಮಹಾಲಕ್ಷ್ಮೀದೇವಿಯ ವೃತ್ತಾಂತ ಅನೇಕ ಪುರಾಣಗಳಲ್ಲಿ ವಿವರಿಸಲಾಗಿದೆ.

ಈಕೆ ಶ್ರೀಮಹಾವಿಷ್ಣುವಿನ ಪ್ರಿಯಪತ್ನಿಯಾಗಿದ್ದು ಆತನ ವಕ್ಷಸ್ಥಳದಲ್ಲೇ ನೆಲೆಸಿರುತ್ತಾಳೆ.

ಶ್ರೀ ಮಹಾಲಕ್ಷ್ಮಿ ಅವತರಿಸಿದ ಕಥೆಯನ್ನು ತಿಳಿದುಕೊಳ್ಳೋಣ ಬನ್ನಿ.

ಹಿಂದೆ ದೇವತೆಗಳು ಮಾನವರು ಕ್ಷೀರಸಾಗರ ಮಥನವನ್ನು ಮಾಡುತ್ತಿರುವಾಗ ಮೊಟ್ಟ ಮೊದಲು ವಿಷವು ಉದ್ಭವಿಸಿತು. ಅದರ ಪ್ರಭಾವದಿಂದ ಲೋಕದಲ್ಲಿನ ಜೀವರಾಶಿಗಳಿಗೆ ಹಾನಿಯುಂಟಾಗುತ್ತದೆ ಎನ್ನುವ ಕಾರಣದಿಂದ ಪರಶಿವನು ಆ ವಿಷವನ್ನು ಕುಡಿದು ವಿಷಕಂಠನಾದ.

ಅಮೃತ ಮಥನವನ್ನು ಮುಂದುವರಿಸಿದಾಗ ಐರಾವತ, ಕಾಮಧೇನು ಕಲ್ಪವೃಕ್ಷ ಹೀಗೆ ಅನಂತ ಸಂಪತ್ತುಗಳು ಹೊರಬಂದವು ಆದರೆ ದಾನವರು ಅದ್ಯಾವುದು ತಮಗೆ ಬೇಡವೆಂದರು ಆಗ ಅವರೆಲ್ಲರೂ ಸ್ವರ್ಗಾಧಿಪತಿಯಾದ ಇಂದ್ರನ ಆಸ್ಥಾನ ಸೇರಿಕೊಂಡರು. ನಂತರ ಅತ್ಯಂತ ಸುಂದರಿಯಾದ ತೇಜೋರಾಶಿಯಾದ. ಮನಮೋಹಕ ಸೌಂದರ್ಯದಿಂದ ಕಂಗೊಳಿಸುತ್ತಿದ್ದ ಶ್ರೀ ಮಹಾಲಕ್ಷ್ಮೀ ಉದ್ಭವಿಸಿದಳು. ಆಕೆಯ ರೂಪ ಲಾವಣ್ಯಗಳನ್ನು ಯಾರಿಂದಲೂ ವರ್ಣಿಸಲು ಸಾಧ್ಯವಾಗಲಿಲ್ಲ. ಆಕೆ ನಿಧಾನವಾಗಿ ಹಂಸ ನಡಿಗೆಯಲ್ಲಿ. ಅಲ್ಲಿ ನೆರೆದಿದ್ದ ದೇವ ದಾನವ ಸಮೂಹವನ್ನು ಒಮ್ಮೆ ತನ್ನ ಓರೆಗಣ್ಣಿನಿಂದ ನೋಡುತ್ತಾ ನೇರವಾಗಿ ಬಂದು ಶ್ರೀಮಹಾವಿಷ್ಣುವಿನ ಕೊರಳಿಗೆ ತನ್ನ ಕೈಯಲ್ಲಿದ್ದ ಮಾಲೆಯನ್ನು ಹಾಕಿ ಆತನನ್ನು ವರಿಸಿದಳು. ಕೂಡಲೇ ಶ್ರೀ ಹರಿಯ ವಕ್ಷಸ್ಥಳವನ್ನು ಸೇರಿದಳು.



ಆಕೆ ಇಂದ್ರನ ಸ್ವರ್ಗಲೋಕದಲ್ಲಿ ಸ್ವರ್ಗ ಲಕ್ಷ್ಮಿಯಾಗಿ, ಸಸ್ಯಗಳಲ್ಲಿ

ಧಾನ್ಯಲಕ್ಷ್ಮಿಯಾಗಿ, ವಿದ್ಯೆಯಲ್ಲಿ ವಿದ್ಯಾಲಕ್ಷ್ಮಿಯಾಗಿ ಸಂಪತ್ತಿ
ನಲ್ಲಿ ಐಶ್ವರ್ಯಲಕ್ಷ್ಮಿಯಾಗಿ, ಸಂತಾನಲಕ್ಷ್ಮೀಯಾಗಿ,
ಧೈರ್ಯದಲ್ಲಿ ಧೈರ್ಯಲಕ್ಷ್ಮಿಯಾಗ್ಗಿ, ಸಾಹಸದಲ್ಲಿ ವೀರಲಕ್ಷ್ಮಿಯಾಗಿ , ಜಯದಲ್ಲಿ
ವಿಜಯಲಕ್ಷ್ಮಿಯಾಗಿ ರಾಜರುಗಳಿಗೆ ರಾಜ್ಯಲಕ್ಷ್ಮಿಯಾಗಿ, ಮೋಕ್ಷ ಬಯಸುವ
ವರಿಗೆ ಮೋಕ್ಷ ಲಕ್ಷ್ಮಿಯಾಗಿ ಹೀಗೆ ಹಲವಾರು ಬಗೆಯಲ್ಲಿ ಪೂಜಿಸಲ್ಪಡುತ್ತಿದ್ದಾಳೆ.

ಶ್ರೀ ಮಹಾವಿಷ್ಣುವಿನ ಎಲ್ಲಾ ಅವತಾರದಲ್ಲೂ ತಾನೂ ಸಹಭಾಗಿನಿಯಾಗಿ ಅವತಾರ ಮಾಡಿದ್ದಳು ಶ್ರೀ ಹರಿಯ ರಾಮಾವತಾರದಲ್ಲಿ ಸೀತೆಯಾಗಿ ರಾವಣನ ಸಂಹಾರಕ್ಕೆ ಕಾರಣಳಾದಳು. ಕೃಷ್ಣಾವತಾರದಲ್ಲಿ ರುಕ್ಮಿಣಿ ಸತ್ಯಭಾಮೆಯಾಗಿ ನರಕಾಸುರನ ಸಂಹಾರ ಮಾಡಿದಳು. ಪರಶುರಾಮಾವತಾರದಲ್ಲಿ ಭೂಮಿ ಯಾಗಿ ವರಾಹಾವತಾರದಲ್ಲಿ ಜಯಂತಿಯಾಗಿ ಹೀಗೆ ಎಲ್ಲಾ ಅವತಾರದಲ್ಲೂ ಶ್ರೀ ಮಹಾವಿಷ್ಣುವಿಗೆ ಸಹಾ ಯಕಿಯಾಗಿ ಅವತಾರ ಮಾಡಿ ಶ್ರೀಮಹಾವಿಷ್ಣುವಿನ ದಶಾವತಾರಗಳಿಗೆ ಒಂದು ರೀತಿಯ ಸಂಪೂರ್ಣತೆ ಯನ್ನು ತಂದು ಕೊಟ್ಟಿದ್ದಾಳೆ.

ಆಕೆಗೆ ಪ್ರಿಯವಾದ ವಾರ ಶುಕ್ರವಾರ, ಆಕೆಯನ್ನು ಚಂದ್ರ ಸಹೋದರಿ ಎಂದೂ ಕರೆಯುತ್ತಾರೆ. ಆಕೆಗೆ ಪ್ರಿಯವಾದ ನೈವೇದ್ಯ ಸಿಹಿಪದಾರ್ಥಗಳಾದಂತಹ ಬೆಲ್ಲದ ಪೊಂಗಲ್, ಪಾಯಸ ಇನ್ನೂ ಮುಂತಾ ದವು ಆಕೆಯನ್ನು ಅಷ್ಟಲಕ್ಷ್ಮಿಯ ರೂಪದಲ್ಲೂ ಎಲ್ಲರಿಂದಲೂ ಸೇವಿಸಲ್ಪಡುತ್ತಿದ್ದಾಳೆ. ಆಕೆಗೆ ಇನ್ನೂ ಸಾವಿರಾರು ನಾಮಧೇಯಗಳಿವೆ. ಆಕೆ ಕ್ಷೀರ ಸಾಗರದಲ್ಲಿ ಜನಿಸಿದ್ದರಿಂದ ಕ್ಷೀರಾಬ್ಧಿಕನ್ನಿಕೆ ಎಂದೂ, ಯಜ್ಞ ಪುರುಷನ ಪತ್ನಿಯಾದ್ದರಿಂದ ದಕ್ಷಿಣಾದೇವಿ ಎಂದೂ, ಜಗಜ್ಜನನೀ ಲೋಕಮಾತೆ. ವೈಕುಂಠಪುರವಾಸಿನಿ, ಕಮಲಾಕ್ಷಿ, ಕಮಲಜ ಹೀಗೆ ಹಲವಾರು ನಾಮಧೇಯಗಳಿಂದ ಮೂರ್ಲೋಕಗಳಲ್ಲೂ ಪೂಜಿಸಲ್ಪಡುತ್ತಿದ್ದಾಳೆ.ಅಂದರೆ ಕೇವಲ ಭೂಲೋಕದಲ್ಲಿನ ಜನರೇ ಅಲ್ಲದೇ ಸ್ವತಃ ನಾರಾಯಣ, ಬ್ರಹ್ಮಾ ಇಂದ್ರ ಮೊದಲಾದ ದೇವತೆಗಳು, ಯಕ್ಷರು, ಕಿನ್ನರರು, ಕಿಂಪುರುಷರು, ಗಂಧರ್ವರು, ಪಾತಾಳಲೋಕದ ನಾಗಜಾತಿಯವರು ಹೀಗೆ ಎಲ್ಲ ರಿಂದಲೂ ಪೂಜೆಯನ್ನು ಸ್ವೀಕರಿಸುತ್ತಿದ್ದಾಳೆ.

ಭೂಲೋಕದಲ್ಲಿ ಶ್ರಾವಣಮಾಸದಲ್ಲಿ ಮಹಾಲಕ್ಷ್ಮಿಯ ಆರಾಧನೆ ಸರ್ವಶ್ರೇಷ್ಠವಾದದ್ದು ಎಂದು ಪುರಾಣಕಾಲದಿಂದಲೂ ತಿಳಿದು ಬಂದಿದೆ. ವಿಶೇಷವಾಗಿ ವರಮಹಾಲಕ್ಷ್ಮಿ ಹಬ್ಬವನ್ನು ಎಲ್ಲರೂ ವೈಭವದಿಂದ ಆಚರಿಸುತ್ತಾರೆ. ಹಾಗೇ ದೀಪಾವಳಿಯ ಅಮಾವಾಸ್ಯೆಯ ದಿನ ಐಶ್ವರ್ಯಾ ಲಕ್ಷ್ಮಿಯನ್ನು ಆರಾಧಿಸಿದರೆ ಮನಸ್ಸಿಗೆ ಸುಖ ಸಂತೋಷ ನೆಮ್ಮದಿ, ಆರೋಗ್ಯ ಐಶ್ವರ್ಯಾ ಸಿದ್ಧಿಸುತ್ತದೆಂದು ಪುರಾಣಗಳಲ್ಲಿ ತಿಳಿಸಿದ್ದಾರೆ.

ಆದ್ದರಿಂದ ಕೇವಲ ಹಿರಿಯರೇ ಅಲ್ಲದೇ ಮಕ್ಕಳೇ ನೀವು ಸಹಾ ಆ ಶ್ರೀಮಹಾಲಕ್ಷ್ಮಿಯನ್ನು ಆರಾಧಿಸಿ ವಿದ್ಯೆ ಸಂಪತ್ತು, ಆರೋಗ್ಯ ಎಲ್ಲವನ್ನೂ ಪಡೆದು ನಿಮ್ಮ ಜೀವನದಲ್ಲಿ ಜಯಶೀಲರಾಗಿ ಧನ್ಯರಾಗಿ

**ನಮಸ್ತೇಸು ಮಹಾಮಾಯೆ ಶ್ರೀಪೀಠೇ ಸುರಪೂಜಿತೇ ॥**

**ಶಂಖಚಕ್ರ ಗದಾಹಸ್ತೇ ಮಹಾಲಕ್ಷ್ಮೀ ನಮೋಸ್ತುತೇ ॥**

# ತಿರುಪ್ಪಾಣಾಳ್ವಾರ್

ಶ್ರೀಮತಿ.ಸಿ.ಎಸ್. ಊರ್ಮಿಳಾ

ಜನನ : ಶ್ರೀರಂಗದ ಸಮೀಪದಲ್ಲಿರುವ ಉರೈಯುಗ್

ಕಲಿಯುಗದ 343 ನೇ ದಿನ ದುರ್ಮತಿ ಸಂವತ್ಸರ ಕಾರ್ತಿಕಮಾಸ ಕೃಷ್ಣಪಕ್ಷ ದ್ವಿತೀಯಾ ಬುಧವಾರ ರೋಹಿಣಿ ನಕ್ಷತ್ರ. ಶ್ರೀವತ್ಸಾಂಶರು ಅಯೋನಿಜರು ಪಂಚಮ ವರ್ಣದಲ್ಲಿ ಅವತರಿಸಿದರು.

ತಿರುಪ್ಪಾಣಾಳ್ವಾರರು ಭಗವಂತನ ಶ್ರೀವತ್ಸಾಂಶದಲ್ಲಿ ಜನಿಸಿದರೂ ತಮ್ಮ ಭಗವದ್ಭಕ್ತಿಯಿಂದ ಆಳ್ವಾರ್ ಎನಿಸಿಕೊಂಡರು. ಅಂತ್ಯಜರಾದ ಕಾರಣ ಇವರಿಗೆ ರಂಗನಾಥನ ದೇವಾಲಯದ ಒಳಗೆ ಬರಲು ಅನುಮತಿ ಇರಲಿಲ್ಲ. ಶ್ರೀರಂಗಕ್ಕೆ ದಕ್ಷಿಣದಲ್ಲಿರುವ ಕಾವೇರಿ ನದಿಯ ದಕ್ಷಿಣ ದಡದಲ್ಲಿಯೇ ವೀಣಾ ಗಾನದೊಡನೆ ಭಗವಂತನನ್ನು ಸ್ತುತಿಸ ತೊಡಗಿದರು ಬಹು ದೂರದಲ್ಲಿಯೇ ನಿಂತುಕೊಂಡು ತನ್ನನ್ನು ಸ್ತುತಿ ಸುತ್ತಿರುವುದನ್ನು ಕಂಡು ಶ್ರೀರಂಗನಾಥನು ಮನಸೋತು ಇವರಿಗೆ ತನ್ನ ಸೇವೆಯನ್ನು ನೀಡಲು ಇಚ್ಛಿಸಿದನು. ಒಡನೆಯೇ ಶ್ರೀರಂಗನಾಥನು ಆಳ್ವಾರರನ್ನು ಬರುವಂತೆ ಅರ್ಚಕರ ಮುಖೇನ ಆಜ್ಞಾಪಿಸಿದರು. ದೇವರ ಆಜ್ಞೆಯಂತೆ ಅರ್ಚಕರಾದ ಲೋಕ ಸಾರಂಗಮುನಿಯು ತಿರುಪ್ಪಾಣಾಳ್ವಾರ್‌ನ್ನು ದೇವಾಲಯಕ್ಕೆ ಕರೆತರಲು ಕಾವೇರಿ ನದಿ ತೀರಕ್ಕೆ ಬಂದರು. ಇತ್ತ ತಿರುಪ್ಪಾಣರು ಅರ್ಚಕರನ್ನು ನೋಡಿ ಮತ್ತೆ ಬಹುದೂರ ಸರಿದರು. ಆಗ ಶ್ರೀರಂಗನಾಥನು ಲೋಕ ಸಾರಂಗ ಮುನಿಯನ್ನು ನೋಡಿ “ಆಳ್ವಾರರನ್ನು ನಿಮ್ಮ ಹೆಗಲಿನಲ್ಲಿ ಏರಿಸಿ ಕೊಂಡು ನನ್ನ ಸನ್ನಿಧಾನಕ್ಕೆ ಕರೆ ತನ್ನಿರಿ. ಅವರು ನನಗೆ ಬಹಳ ಪ್ರಿಯರು ಅವರನ್ನು ಕೀಳು ಜಾತಿಯವರೆಂದು ತಿರಸ್ಕರಿಸಬೇಡಿ’’ ಎಂದರು. ಅದರಂತೆ ಉಭಯ ಕಾವೇರಿಗಳ



ನಡುವೆ ಇರುವ ಶ್ರೀರಂಗ ಕ್ಷೇತ್ರವನ್ನು ತುಳಿಯಲೂ ಸಹ ಹಿಂತೆಗೆಯುತ್ತಿದ್ದ ಆಳ್ವಾರರನ್ನು ಲೋಕಸಾರಂಗ

ಮುನಿಗಳು ತಿರುಪ್ಪಾಣಾಳ್ವಾರರನ್ನು ತಮ್ಮ ಹೆಗಲ ಮೇಲೆಯೇ ಕೂರಿಸಿಕೊಂಡು ಭಗವತ್ಸನ್ನಿಧಿಗೆ ಬಂದರು. ಅಂದಿನಿಂದ ತಿರುಪ್ಪಾಣಾಳ್ವಾರಿಗೆ ಮುನಿ ವಾಹನ ಎಂದೇ ಮತ್ತೊಂದು ಹೆಸರಾಯಿತು. ಭಕ್ತ ಪರಾಧೀನನಾದ ಶ್ರೀರಂಗನಾಥನನ್ನು ಕಣ್ಣಾರೆ ಕಂಡ ಆಳ್ವಾರರು "ಎನ್ನ ಮುದಿನೈಕಂಡ ಕಣ್‌ಗಳ್ ಮತ್ತೊನ್ರಿನೈ ಕಾಣಾವೇ" ಎಂದು ಭಗವಂತನನ್ನು ಸೇವಿಸಿದ ಈ ಕಣ್ಣುಗಳು ಮತ್ತೊಮ್ಮೆ ಈ ಪ್ರಾಪಂಚಿಕ ಸುಖವನ್ನು ನೋಡುವುದಿಲ್ಲ ಎಂದು ಶ್ರೀರಂಗನಾಥನನ್ನು ಕಂಡು ಅನುಭವಿಸುತ್ತಿರುವಂತೆಯೇ ಅಲ್ಲಿಯೇ ಭಗವಂತನ ಪಾದಾರ ವಿಂದಗಳಲ್ಲಿ ಐಕ್ಯರಾದರು. ಇದನ್ನು ಎಲ್ಲರೂ ನೋಡಿ ಅಚ್ಚರಿಗೊಂಡರು.

ಭಗವಂತನನ್ನು ಸೇವಿಸಿ ತಮ್ಮ ಅನುಭವಾಮೃತವನ್ನು ಆಳ್ವಾರರು "ಅಮಲನಾದಿಪಿರಾನ್" ಎಂಬ 10 ಪಾಶುರಗಳಿಂದ ಕೂಡಿದ ದಿವ್ಯ ಪ್ರಬಂಧವನ್ನು ಲೋಕಕ್ಕೆ ಅನುಗ್ರಹಿಸಿದ್ದಾರೆ. ತಿರುಪ್ಪಾಣಾಳ್ವಾರ್ ರ 'ಅಮಲ ನಾದಿಪಿರಾನ್' ಎಂಬ ಪ್ರಬಂಧದ ಕೊನೆಯ ಎರಡು ಪಾಶುರಗಳು

ಆಲಮಾಮರತ್ತಿನಿಲೈ ಮೇಲ್ ಒರುಪಾಲಕನಾಯ್
ಇಗಾಲ ಮೇಳು ಮುಂಡಾನ್ ಅರಂಗತ್ತ ರವಿನಣೈಯಾನ್
ಕೋಲಮಾಮಣಿಯಾರಮುಮ್ ಮುತ್ತುತ್ತಾಮಮುಮ್
ಮುಡಿವಿಲ್ಲದೊರೆಳಿಲ್
ನೀಲಮೇನಿ ಐಯ್ಯೋ ನಿರೈಕೊಂಡದು ಎನ್ ನೆಂಜಿನೈಯೆ
ಕೊಂಡಲ್ ವಣ್ಣನೈ ಕೋವಲನಾಯ್ ವೆಣ್ಣೈ
ಯುಂಡವಾಯನ್ ಎನ್ನುಳ್ಳಮ್ ಕವರ್ನ್ದಾನೈ
ಅಂಡರ್‌ಕೋನ್ ಅಣಿಯರಂಗನ್ ಎನ್ನಮುದಿನೈ
ಕಂಡ ಕಣ್ಗಳ್ ಮತ್ತೊ ನ್ರಿನೈ ಕ್ಕಾಣಾವೇ

ಈ ಮೇಲಿನ ಪದ್ಯಗಳನ್ನು ಶ್ರೀ ಕೃಷ್ಣಜನ್ಮಾಷ್ಟಮಿಯಂದು ಹಾಡುವ ಪದ್ಧತಿ ಇಂದಿಗೂ ಇದೆ.

# ಪ್ರಸನ್ನ ವೆಂಕಟದಾಸರು

- ಶ್ರೀಮತಿ. ಸುಧಾಮಧುಸೂದನ್



ಕ್ರಿಸ್ತಶಕ ಹದಿನೇಳನೆಯ ಶತಮಾನದಿಂದ ದಾಸಸಾಹಿತ್ಯದ ಎರಡನೆಯ ಯುಗವು ಆರಂಭವಾಗುವುದು. ಇದಕ್ಕೆ ಮೂಲಪುರುಷರು ವಿಜಯದಾಸರು. ಪ್ರಸನ್ನ ವೆಂಕಟದಾಸರು ಇವರ ಸಮಕಾಲೀಕರು. ವಿಜಯದಾಸರ ಪರಂಪರೆ ಬೆಳೆದಂತೆ ಪ್ರಸನ್ನ ವೆಂಕಟರ ಪರಂಪರೆ ಬೆಳೆಯಲಿಲ್ಲ. ಪ್ರಸನ್ನ ವೆಂಕಟರ ಹೆಸರೂ ವಿಜಯದಾಸರಷ್ಟು ಹೆಚ್ಚು ಪ್ರಚಾರಕ್ಕೆ ಬರಲಿಲ್ಲ. ಇದಕ್ಕೆ ಇನ್ನೂ ಒಂದು ಕಾರಣವನ್ನು ಊಹಿಸಬಹುದು. ಯದ್ಯಪಿ ಪುರಂದರದಾಸರಾದ ಮೇಲೆ ನೂರಾರು ವರ್ಷಗಳ ನಂತರ ವಿಜಯದಾಸರು ಬಂದರೂ ಅವರು ವ್ಯಾಸಕಾಶಿಯಲ್ಲಿ ಪುರಂದರದಾಸರಿಂದಲೇ ಸ್ವಪ್ನ ದ್ವಾರಾ ಅಂಕಿತ ಪಡೆದು ದಾಸತ್ವ ದೀಕ್ಷೆವಹಿಸಿದ್ದರಿಂದ ಇವರೇ ಪುರಂದರದಾಸರ ತರುವಾಯ ದಾಸ ಸಾಹಿತ್ಯದ ಪಟ್ಟವನ್ನು ವಹಿಸಿದರೆನ್ನಬಹುದು. ಇದರಿಂದಲೇ ವಿಜಯ ದಾಸರ ಹೆಸರೂ ಹೆಚ್ಚು ಪ್ರಚಾರವಾಗಿರಬೇಕು. ಆದರೆ ವಿಜಯ ದಾಸರು ಪ್ರಸನ್ನ ವೆಂಕಟದಾಸರು ಇವರಿಬ್ಬರಿಗೂ ಪ್ರೇರಕ ಶಕ್ತಿಯಾಗಿ ದಾಸ ಸಾಹಿತ್ಯ ಬೆಳಸಿಕೊಟ್ಟ ಕೀರ್ತಿರಾಯರಿಗೆ ಸೇರಿದ್ದು , ಪ್ರಸನ್ನದಾಸರೂ, ವಿಜಯದಾಸರೂ ಅಂತೆಯೇ ರಾಯರನ್ನು ವಿಶೇಷವಾಗಿ ಸ್ತೋತ್ರ ಮಾಡಿದರು.

ಪ್ರಸನ್ನವೆಂಕಟದಾಸರ ಹೆಸರು ವೆಂಕಪ್ಪನವರು ಇವರು ಬಾಗಲ ಕೋಟೆಯ ಹತ್ತಿರ ಕಾಂಡಿಕೆಯೆಂಬ ಗ್ರಾಮದವರು. ಆದರೆ ಬಾಗಿಲ ಕೋಟೆಯಲ್ಲೇ ಬಂದು ನೆಲೆಸಿದ್ದರು. ಬಾಲ್ಯದಲ್ಲಿ ಅಣ್ಣ - ಅತ್ತಿಗೆ ಯರ ಪೋಷಣೆಯಲ್ಲಿದ್ದ ವೆಂಕಪ್ಪನವರು ಹೆಚ್ಚಿನ ಸಂಸ್ಕೃತಿ ಪಡೆಯ ಅಲ್ಲ. ಆದರೆ ಸ್ವಾಭಾವಿಕವಾಗಿ ಇವರಿಗೆ ತಿರುಪತಿ ವೆಂಕಟೇಶನಲ್ಲಿ ಬಲು ಭಕ್ತಿ. ಮನೆಯಲ್ಲಿ ಬೇಸರ ಬಂದು ಇವರು ತಿರುಪತಿಗೆ ಹೋಗಿ ಅಲ್ಲಿ ವೆಂಕಟೇಶನ ಅನುಗ್ರಹ ಪಡೆದು ಪ್ರಸನ್ನವೆಂಕಟನೆಂಬ ಅಂಕಿತದಿಂದ

ಪದಪದ್ಯಗಳನ್ನು ರಚಿಸಿದರು. ಇವರು ರಚಿಸಿದ ಪದಗಳ ಹಳೆಯ ವಹಿಯು ಇವರ ವಂಶಜರಲ್ಲಿ ಈಗಲೂ ಇವೆ. ಅನೇಕ ಪದಗಳಲ್ಲದೆ ಇವರು ದಶಮಸ್ಕಂದ ಭಾಗವತವನ್ನು ಕನ್ನಡಿಸಿರುವರು. ಇವರ ಪದಗಳಲ್ಲಿ ಪದಪ್ರೌಢಿಯೂ, ಅಲಂಕಾರವೂ, ಪ್ರಾಸವೂ ಹೆಚ್ಚಾಗಿ ಕಂಡು ಬರುವುದು.

"ಮಾಧವ ನಾನೇನು ಓದಿದವನಲ್ಲ ಶ್ರೀಪಾದವೆ ಗತಿಯೆಂಬೆ ಬಾಧಿಸುತ್ತೈದಾರೆ" ಎಂದು ಅವರೇ ಹೇಳಿಕೊಂಡಿರುವಂತೆ, ಅವರು ವಿದ್ಯಾಭ್ಯಾಸ ಮಾಡದಿದ್ದರೂ, ಹರಿಯ ಅನುಗ್ರಹ ಬಲದಿಂದ ಉತ್ತಮ ಕವಿತಾಶಕ್ತಿಯನ್ನೂ, ಅದಕ್ಕಿಂತಲೂ ಹೆಚ್ಚಾಗಿ ಭಗವದ್ಭಕ್ತಿಯನ್ನೂ ಪಡೆದರು. ಇವರು ಕ್ರಿ.ಶ. 1674 ನೆಯ ಭಾದ್ರಪದ ಶುದ್ಧ ದ್ವಾದಶಿಯ ದಿನ ವೈಕುಂಠವಾಸಿಗಳಾದರೆಂದು ಇವರ ವಂಶಜರಲ್ಲಿ ಕಾಗದ ಪತ್ರಗಳಿಂದ ತಿಳಿದು ಬರುತ್ತದೆ. ಇವರ ಮುಂದೆ ಎರಡು ತಲೆಮಾರಿನ ವರೆಗೂ ಹರಿದಾಸರಾಗಿದ್ದರು.

### ಸ್ವಾಮಿ ಪುಷ್ಕರ ತೀರ ನಿಲಯ ನಮೋ

ಸ್ವಾಮಿ ಪುಷ್ಕರ ತೀರ ನಿಲಯ ನಮೋ
ಸ್ವಾಮಿ ವರಹಾ ವೆಂಕಟನಾಯಕ
ಸ್ವಾಮಿ ಪಾಹಿ ಪಾಹಿ ತ್ರಾಹೀ
ಸ್ವಾಮಿ ವರಹಾ ವೆಂಕಟನಾಯಕ

ಯಜ್ಞ ಗಾತ್ರ ವಿಧಿನುತ ಪ್ರಭೋ ಶ್ರೀ -
ಯಜ್ಞ ವರಹಾ ವೆಂಕಟನಾಯಕ
ಯಜ್ಞ ಭೋಕ್ತ್ರ ಹೆಮಾಂಬಕ ಹರ
ಯಜ್ಞ ವರಹಾ ವೆಂಕಟನಾಯಕ

ಭೂಭಯದೂರ ಧರಾ ಮನೋಹರ
ಭೂವರಾಹ ವೆಂಕಟನಾಯಕ
ಶೋಭಿತ ಬಾಲ ಚಂದ್ರೋಪಮ ಕ್ರೋಧ
ಭೂವರಾಹ ವೆಂಕಟನಾಯಕ


ಶ್ವೇತ ಹಯವದನ ಶ್ವೇತಾಂಬರಧರ
ಶ್ವೇತ ವಾಹನ ಸಖ ಶ್ವೇತ ನಿಭಾ
ಶ್ವೇತಾದ್ರೀಶಾರ್ಚಿತ ಪಾದ ಕಮಲ
ಶ್ವೇತವರಾಹ ವೆಂಕಟನಾಯಕ
ಪಾತಕ ಮೋಚಕ ಪ್ರಸನ್ನೆಂಕಟ
ಶ್ವೇತವರಾಹ ವೆಂಕಟನಾಯಕ


ಚಿತ್ರಕಥೆ

# ಪದ್ಮಸರೋವರ


ಕಥೆ:ತೆಲುಗು ಮೂಲ : ಡಿ.ಶ್ರೀನಿವಾಸ ದೀಕ್ಷಿತರು
ಅನುವಾದ : ಶ್ರೀಮತಿ. ಆರ್. ಕೃಷ್ಣವೇಣಿ
ಚಿತ್ರಗಳು : ಕೆ. ದ್ವಾರಕಾನಾಥ್




ನಾನು ನೆಟ್ಟ ಎಂಟು ಪದ್ಮಗಳು ಸಾವಿರ ಪದ್ಮಗಳಾಗಿ ವಿಸ್ತರಿಸಿವೆ.
ಈ ಸರೋವರದಲ್ಲಿ ಸ್ವರ್ಣ ಕಮಲಗಳನ್ನು ಸ್ವಯಂಭುವಾಗಿ ಶ್ರೀನಿವಾಸನೇ ನೆಟ್ಟರು
ಸರೋವರದ ಪೂರ್ವಕ್ಕೆ ಸೂರ್ಯನನ್ನು ಶ್ರೀನಿವಾಸನೇ ಪ್ರತಿಷ್ಠಾಪಿಸಿದರು.
ಭಾಸ್ಕರಾ! ಈ ಸರೋವರಕ್ಕೆ ನೀನೇ ರಕ್ಷಕನು.
ನಿಮ್ಮ ಆಜ್ಞೆ
6. ಆ ಸರೋವರದಲ್ಲಿ ಸ್ನಾನವನ್ನು ಮಾಡುತ್ತಾ ಮೂರು ಸಾವಿರ ಸಲ ಮಹಾ ಲಕ್ಷ್ಮಿ ಮಂತ್ರವನ್ನು ಜಪಿಸುತ್ತಾ ಸಾವಿರ ಸ್ವರ್ಣ ಕಮಲ ಗಳೊಂದಿಗೆ ಆಕೆಯನ್ನು ಅರ್ಚಿಸುತ್ತಿದ್ದಾನೆ ಶ್ರೀನಿ ವಾಸನು ಹಸುವಿನ ಹಾಲನ್ನು ಮಾತ್ರವೇ ಆಹಾರವಾಗಿ ಸ್ವೀಕ ರಿಸುತ್ತಿದ್ದಾನೆ. ಪುಷ್ಕರಕಾಲ ಕಳೆಯಿತು. ಸ್ವಾಮಿ ಬಳಿಗೆ ನಾರದ ಮಹರ್ಷಿ ಬಂದು...
ಸ್ವಾಮಿ! ತಪಸ್ಸಿನಿಂದ ನೀವು ಬಹಳ ಕ್ಷೀಣಿಸಿದ್ದೀರಾ ತಪಸ್ಸನ್ನು ನಿಲ್ಲಿಸಬಹುದಲ್ಲವೇ!
ಆಕೆ ಕರುಣಿಸುವವರೆಗೂ ನಾನು ನನ್ನ ತಪಸ್ಸನ್ನು ನಿಲ್ಲಿಸಲಾರೆ




ನಂತರ ಶುಕಮಹರ್ಷಿ ಇತರ ಮುನಿಗಳು ಬಂದು ಶ್ರೀನಿವಾಸನನ್ನು ಪರಿಶೀಲಿಸಿದರು.
ಸ್ವಾಮಿ! ನೀವು ತಪಸ್ಸನ್ನು ವಿರಮಿಸು
ಆಕೆ ನನ್ನನ್ನು ಕರುಣಿಸಿದ ನಂತರವೇ ನಾನು ತಪಸ್ಸನ್ನು ನಿಲ್ಲಿಸುತ್ತೇನೆ
ಮುನಿಗಳು ಪಾತಾಳದಲ್ಲಿರುವ ಮಹಾಲಕ್ಷ್ಮಿ ಬಳಿಗೆ ಹೋಗಿ .
ಮಹಾಲಕ್ಷ್ಮಿ! ನಿನಗಾಗಿ ಸ್ವಾಮಿ ಕಠೋರ ತಪಸ್ಸು ಮಾಡುತ್ತಿದ್ದಾರೆ. ಕೋಪ ಬಿಟ್ಟು ಪದ್ಮ ಸರೋವರಕ್ಕೆ ಹೊರಟು ಬಾ ತಾಯಿ !
ಕಪಿಲ ಮಹರ್ಷಿ ಸಹಾ ಮಹಾಲಕ್ಷ್ಮಿಗೆ ಕರುಣಿಸುವಂತೆ ಹೇಳಿದರು ಆಗ....
ಸರಿ... ನಿಮ್ಮೆಲ್ಲರ ಕೋರಿಕೆ ಮೇರೆಗೆ ಕ್ಷಮಿಸಿ ಬರುತ್ತೇನೆ.


ಕಾರ್ತೀಕ ಮಾಸ.. ಶುದ್ಧಪಂಚಮಿ... ಉತ್ತರಾಷಾಢ... ಶುಕ್ರವಾರ... ಅಮೃತ ಘಳಿಗೆಯಲ್ಲಿ ಪದ್ಮ ಸರೋವರದಲ್ಲಿ ಮುನಿಗಳ ಸಮಕ್ಷಮದಲ್ಲಿ....
ಅದೋ ಸಾವಿರ ಕಮಲಗಳು ವಿಕಸಿವೆ.... ಅದರೊಳಗಿನಿಂದ ಸ್ವರ್ಣ ರಥವನ್ನು ಅಧಿರೋಧಿಸಿದಳು ಸಿರಿಗಳ ತಾಯಿ....
ಸ್ವಾಮಿ ಬಳಿ ಬಂದು ಮಾಲೆಯನ್ನು ಸ್ವಾಮಿಗೆ ಹಾಕಿ ನಮಸ್ಕರಿಸಿದಳು ಆ ತಾಯಿ...
ಸ್ವಾಮಿ ! ನನ್ನ ಪ್ರಣಾಮಗಳನ್ನು ಸ್ವೀಕರಿಸಿ!
ದೇವಿ ನನ್ನ ವಕ್ಷಃ ಸ್ಥಳವೇ ನಿನ್ನ ಸ್ಥಿರನಿವಾಸ
ವ್ಯೂಹಲಕ್ಷ್ಮಿಯಾಗಿ ಸ್ವಾಮಿಯವರ ಹೃದಯದಲ್ಲಿ ಆಸೀನಳಾದಳು ಮಹಾಲಕ್ಷ್ಮಿ !
ಮುಂಬರುವ ಸಂಚಿಕೆಯಲ್ಲಿ ಶ್ರೀ ವೆಂಕಟೇಶ್ವರನ ಮತ್ತೊಂದು ದಿವ್ಯಲೀಲೆಯನ್ನು ದರ್ಶಿಸೋಣ...
ಸ್ವಸ್ತಿ

ನೀತಿಪಾಠ

# ದೇವರಿಗೆ ಅರ್ಪಿತ

**-ಡಿ.ಎಸ್. ಮಧುಸೂದನ್**



ಒಬ್ಬ ರೈತನು ತನ್ನ ತೋಟದಲ್ಲಿ ದೊಡ್ಡ ಬಾಳೆಗೊನೆಯು ಬಿಟ್ಟಿತು. ಅವನು ಆ ಗೊನೆಯನ್ನು ಶ್ರೀನಿವಾಸನಿಗೆ ಅರ್ಪಿಸ ಬೇಕೆಂದು ಅಂದುಕೊಂಡು ತಿರುಪತಿಗೆ ಹೋಗುವ ಮನಸ್ಸು ಮಾಡಿದನು. ಅವನು ತನ್ನ ತೋಟದ ಬಾಳೆಹಣ್ಣನ್ನು ಹದವಾಗಿ ಹಣ್ಣಾದಂತೆ ಅದನ್ನು ಕಿತ್ತನು. ಅವನು ಆ ಹಣ್ಣನ್ನು ತನ್ನ ಹೆಗಲ ಮೇಲೆ ಹೊತ್ತು ತಿರುಪತಿಗೆ ನಡೆದೇ ಸಾಗಿದನು. 'ಗೋವಿಂದ' 'ಗೋವಿಂದ' ಎನ್ನುತ್ತಾ ತಿರುಪತಿಯನ್ನು ತಲುಪಿದನು.

ಆದರೆ ಶ್ರೀನಿವಾಸನನ್ನು ನೋಡಬೇಕೆಂದರೆ ಬೆಟ್ಟಹತ್ತಿ ಹೋಗಬೇಕಿತ್ತು.ಅವನು "ಶ್ರೀನಿವಾಸ" ಎನ್ನುತ್ತಾ ಬೆಟ್ಟದ ಒಂದೊಂದೇ ಮೆಟ್ಟಲನ್ನು ಹತ್ತುತ್ತಾ ಆ ದೊಡ್ಡ ಬಾಳೆಗೊನೆಯನ್ನು ಹೊತ್ತು ಬಹಳ ಸಂತೋಷದಿಂದ ಸಾಗಿದನು. ದಾರಿಯ ಮಧ್ಯದಲ್ಲಿ ಆ ರೈತನಿಗೆ ಹಸಿವಾಯಿತು. ಅವನ ಹತ್ತಿರ ಬಾಳೆ ಹಣ್ಣುಗಳನ್ನು ಬಿಟ್ಟರೆ ಇನ್ನೇನು ಇರಲಿಲ್ಲ. ಹಸಿವಿನ ಸಂಕಟವನ್ನು ಅವನು ತಾಳದೆ ಏನು ಮಾಡುವುದು ಎಂದು ಯೋಚಿಸಿದನು. ಕೈಯಲ್ಲಿದ್ದ

ಬಾಳೆಹಣ್ಣನು ನೋಡಿ ಬರೀ 2 ಬಾಳೆ ಹಣ್ಣನ್ನು ತಿನ್ನೋಣ ಹೇಗಿದ್ದರೂ ಎಲ್ಲವನ್ನೂ ಅವನಿಗೆ ಅರ್ಪಿಸುವೆನಲ್ಲಾ ಎಂದು 2 ಬಾಳೆಹಣ್ಣನ್ನು ಕಿತ್ತು "ಶ್ರೀನಿವಾಸ ನಿನಗೇ ಅರ್ಪಿತಾ" ಎನ್ನುತ್ತಾ ತಿಂದನು. ಸ್ವಲ್ಪ ದೂರ ಮೆಟ್ಟಲು ಹತ್ತಿದ ನಂತರ ಮತ್ತೆ ಹಸಿವೆ ಶುರುವಾಯಿತು.ಮತ್ತೆ ಅವನು ಎರಡು ಬಾಳೆಹಣ್ಣನ್ನು ಕಿತ್ತು "ದೇವರೇ ನಿನಗೆ ಅರ್ಪಿತ" ಎನ್ನುತ್ತಾ ತಿಂದನು.

ಹೀಗೆ ಮೆಟ್ಟಲುಗಳನ್ನು ಹತ್ತುತ್ತಾ ಹಸಿವೆಯ ಬಾಧೆಯಲ್ಲಿ ಎರಡೆರಡು ಬಾಳೆಹಣ್ಣುಗಳನ್ನು "ನಿನಗೆ ಅರ್ಪಿತ ದೇವರೇ " ಎನ್ನುತ್ತಾ ತಿಂದನು. ಅವನು ಮೆಟ್ಟಲುಗಳನ್ನು ಹತ್ತಿ ತಿರುಮಲೆ ತಲುಪುವುದರಲ್ಲಿ ಆ ಗೊನೆಯಲ್ಲಿ ಬರೀ 2 ಬಾಳೆಹಣ್ಣುಗಳು ಮಿಕ್ಕಿತು. ಅವನು "ಅಯ್ಯಾ ಈ ನನ್ನ ಹಸಿವು ಸಂಕಟದಲ್ಲಿ ಎಲ್ಲವನ್ನು ತಿಂದೆನಲ್ಲಾ" ಎಂದು ನೊಂದು ಆ 2 ಬಾಳೆಹಣ್ಣನ್ನು ಶ್ರೀನಿವಾಸನಿಗೆ ಅರ್ಪಿಸಿ ಬಹಳವಾಗಿ ನೊಂದುಕೊಂಡನು.

ಅದರೆ ರಾತ್ರಿ ಶ್ರೀನಿವಾಸನು ಅವನ ಕನಸಿನಲ್ಲಿ ಬಂದು "ಅಯ್ಯಾ ಭಕ್ತಮಹಾಶಯ ನೊಂದುಕೊಳ್ಳಬೇಡ ನನಗೆ ಎಲ್ಲಾ ಬಾಳೆ ಹಣ್ಣುಗಳು ತಲುಪಿತು 2 ಬಾಳೆಹಣ್ಣು ಬಿಟ್ಟು , ನೀನು ಪ್ರತಿ ಸಲ ತಿನ್ನುವಾಗ ಶ್ರೀನಿವಾಸ ನಿನಗೆ ಅರ್ಪಿತ ಎನ್ನುತ್ತಾ ತಿಂದೆಯಲ್ಲಾ ಅದೆಲ್ಲವೂ ನನಗೆ ಸೇರಿತು.ಆದರೆ ಕಡೆಯ 2 ಹಣ್ಣು ಹಾಗೆ ನನಗೆ ಕೊಟ್ಟೆಯಲ್ಲ ಅದು ತಲುಪಲಿಲ್ಲ" ಎಂದನು.

ಮಕ್ಕಳೆ ಇದರಿಂದ ನಾವೇನು ಕಲಿಯಬೇಕೆಂದರೆ ಏನೇ ನೀವು ತಿನ್ನಬೇಕಾದರು "ದೇವರೇ ನಿನಗರ್ಪಿತಾ " ಎಂದರೆ ಅದು ದೇವರಿಗೆ ಸೇರುತ್ತೆ ನೀವು ಈ ಅಭ್ಯಾಸವನ್ನು ಮಾಡುತ್ತೀರಿ ತಾನೇ !

**ಕೃಷ್ಣಾರ್ಪಣಮಸ್ತು**

# ಪ್ರಜ್ಞಾವಂತ ಬಾಲಕಿ



**ಹೆಸರು :** ಎಸ್. ಭವ್ಯ

**ತರಗತಿ : -** 7 ನೇ ತರಗತಿ

**ತಂದೆಯ ಹೆಸರು :** ಗಿರೀಶ್ ಚಂದ್ರನ್ ಪಿ.

**ತಾಯಿಯ ಹೆಸರು :** ಸ್ಮಿತಾ ಬಿ.ಜಿ

**ಪಾಠಶಾಲೆಯ ಹೆಸರು :** ಸರ್ವೋದಯ ವಿದ್ಯಾಲಯ ನಲಂಚೀರ ತಿರುವನಂತಪುರಂ, ಕೇರಳ.

**ಪ್ರತಿಭೆಗಳು :** ಶಾಸ್ತ್ರೀಯ ಸಂಗೀತ, ಶಾಸ್ತ್ರೀಯ ನೃತ್ಯ, ಭಗವದ್ಗೀತೆ ಪಠಣೆ, ಕಲಾರಿ.

ಈ ಬಾಲಕಿ, ನಮ್ಮ ಸಂಸ್ಕೃತಿಯ ಬೆನ್ನೆಲುಬಾದ ಶಾಸ್ತ್ರೀಯ ಸಂಗೀತ ಮತ್ತು ನೃತ್ಯಕಲೆಗಳನ್ನು ಕರತಲಾಮಲಾಕ ಮಾಡಿಕೊಂಡಿದ್ದಾಳೆ.

ಭವ್ಯ ಶಾಸ್ತ್ರೀಯ ಸಂಗೀತವನ್ನು ತನ್ನ ಐದನೆಯ ವಯಸ್ಸಿನಲ್ಲೇ ಗುರುಗಳಾದ ಶ್ರೀಮತಿ ಲಕ್ಷ್ಮಿ ಸುಬ್ಬ ಅವರಲ್ಲಿ ಪ್ರಾರಂಭಿಸಿದ್ದಾಳೆ. ಆಕೆ ಅನೇಕ ಕಾರ್ಯಕ್ರಮಗಳನ್ನೂ ನೀಡಿದ್ದಾಳೆ. ಅದರಲ್ಲೂ ಭಜನೆಗಳನ್ನು ಹಾಡಿರುತ್ತಾಳೆ. ತನ್ನ ಹತ್ತನೆಯ ವಯಸ್ಸಿನಲ್ಲಿ ತರಂಗಾನಿಸರಿ ಸಂಗೀತ ಶಾಲೆಯಲ್ಲಿ ಗುರುಗಳಾದ ಶ್ರೀಜ್ಯೋತಿ ಕುಮಾರ್ ಮತ್ತು ಶ್ರೀಮತಿ ಆಶಾ ಎಸ್. ದೇವ್ ಅವರ ಬಳಿ ಸಂಗೀತ ಅಭ್ಯಾಸ ಮಾಡುತ್ತಿದ್ದಾಳೆ. ಶಾಲೆಯಲ್ಲಿ ನಡೆದ ಸುಗಮಸಂಗೀತ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಗಳಿಸಿದ್ದಾಳೆ.

ಭವ್ಯ ಶಾಸ್ತ್ರೀಯ ನೃತ್ಯವನ್ನು (ಭರತನಾಟ್ಯ, ಕೂಚಿಪುಡಿ) ಗುರುಗಳಾದ ಶ್ರೀಮತಿ ಶ್ರೀಯಾಅವರ ಬಳಿ ಅಭ್ಯಾಸ ಮಾಡುತ್ತಿದ್ದಾಳೆ. ಆಕೆಯ ಮೊದಲ ನೃತ್ಯ ಪ್ರದರ್ಶನ 2019 ರಲ್ಲಿ ಅಟ್ಟುಕುಲ ದೇವಿ ದೇವಸ್ಥಾನದಲ್ಲಿ ನವರಾತ್ರಿ ಪೂಜಾ ಸಂದರ್ಭದಲ್ಲಿ ನೀಡಿದ್ದಾಳೆ. ಜೊತೆಗೆ ಪದ್ಮನಾಭಸ್ವಾಮಿ ದೇವಸ್ಥಾನದಲ್ಲೂ ತನ್ನ ಪೊಂಗಲ್ ಹಬ್ಬದ ಸಂದರ್ಭದಲ್ಲಿ ನೃತ್ಯ ಪ್ರದರ್ಶನವನ್ನು ನೀಡಿದ್ದಾಳೆ.

ಇಷ್ಟೇ ಅಲ್ಲದೇ ಭಗವದ್ಗೀತಾ ಪಠಣೆಯಲ್ಲೂ ತನ್ನ ಪ್ರತಿಭೆಯನ್ನು ಮೆರೆದಿದ್ದಾಳೆ. ಗುರುಗಳಾದ ಶ್ರೀಮತಿ ಲಕ್ಷ್ಮೀ ಶುಭ ಅವರ ಬಳಿ ಅಭ್ಯಾಸ ಮಾಡುತ್ತಿದ್ದಾಳೆ.

ಜೊತೆಗೆ ಕೇರಳದ ಪ್ರಮುಖ ಕಲೆಯಾದ 'ಕಲಾರಿ' ಯನ್ನು ಸಹ ಗುರುಗಳಾದ ಡಾ॥ ಗೌತಮನ್ ಅವರ ಬಳಿ ಅಭ್ಯಾಸ ಮಾಡುತ್ತಿದ್ದಾಳೆ. ಈ ಬಾಲಕಿ ತನ್ನ ಜೀವನದಲ್ಲಿ ಇನ್ನೂ ಉತ್ತುಂಗಕ್ಕೇರಲಿ ಎಂದು 'ಬಾಲಸಪ್ತಗಿರಿ' ಹಾರೈಸುತ್ತಿದೆ.

# ಕ್ವಿಜ್

-ನಿರ್ವಹಣೆ ಶ್ರೀಮತಿ. ಸೂರ್ಯವಂಶಿ

1) ದೀಪಾವಳಿ ಹಬ್ಬವನ್ನು ಆಚರಿಸುವ ಮಾಸ (ತಿಂಗಳು) ಯಾವುದು?

ಅ) ಶ್ರಾವಣ　　ಆ) ಭಾದ್ರಪದ

ಇ) ಕಾರ್ತೀಕ　　ಈ) ಮಾಘ

2) ದೀಪಾವಳಿ ಹಬ್ಬದ ಮೊದಲ ದಿನ ಯಾವ ಅಸುರನ ಸಂಹಾರದ ಗುರುತಾಗಿ ಆಚರಿಸುತ್ತೇವೆ?

ಅ) ನರಕಾಸುರ　　ಆ) ಸೋಮಾಸುರ

ಇ) ಅಘಾಸುರ　　ಈ) ಅಲಂಬಾ

3) ನರಕಾಸುರನನ್ನು ಸಂಹರಿಸಿದವರು ಯಾರು?

ಅ) ಸತ್ಯಭಾಮೆ　　ಆ) ರುಕ್ಮಿಣಿ

ಇ) ಸೀತಾ　　ಈ) ದ್ರೌಪದಿ

4) ದೀಪಾವಳಿ ಅಮಾವಾಸ್ಯೆಯಂದು ಯಾವ ದೇವಿಯನ್ನು ಪೂಜಿಸುತ್ತೇವೆ?

ಅ) ದುರ್ಗಾದೇವಿ　　ಆ) ಲಕ್ಷ್ಮೀ ದೇವಿ

ಇ) ಸರಸ್ವತಿ ದೇವಿ　　ಈ) ಲಲಿತಾದೇವಿ

5) ದೀಪಾವಳಿಯನ್ನು ಎಷ್ಟು ದಿನಗಳ ಕಾಲ ಆಚರಿಸುತ್ತೇವೆ?

ಅ) ಎರಡು　　ಆ) ನಾಲ್ಕು

ಇ) ಮೂರು　　ಈ) ಒಂದು

6) ದೀಪಾವಳಿ ಯಾವ ಇನ್ನೊಂದು ಹಬ್ಬದ ನಂತರ ಬರುತ್ತದೆ?

ಅ) ದಸರಾ　　ಆ) ಗೌರಿಗಣೇಶ

ಇ) ವರಮಹಾಲಕ್ಷ್ಮಿ　　ಈ) ಸರಸ್ವತಿ ಹಬ್ಬ

7) ಸತ್ಯಭಾಮೆಯ ತಂದೆಯ ಹೆಸರೇನು?

ಅ) ಸತ್ರಾಜಿತು　　ಆ) ಅಕ್ರೂರ


ಇ) ಜನಕ　　ಈ) ವಸುದೇವ

ಉತ್ತರಗಳು:

1) ಇ 2) ಅ 3) ಅ 4) ಆ 5) ಇ 6) ಅ 7) ಅ

# ಚಿತ್ರಲೇಖನ

ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......



ಮೇಲಿನ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...



ನಂಪಾಡುವಾನ್

SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
printing on 25-10-2020. Regd. with the Registrar of Newspapers under "RNI" No.10742,
Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020

